**ದಿನಾಂಕಃ 07-03-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು: ವಾದಿ ಪರ ಶ್ರೀ ಎಸ್.ಎಂ.ಪಿ ವಕೀಲರಿಂದಃ**

ನಾನು ನೀರಲಗಿ ಗ್ರಾಮದಲ್ಲಿ ಇರುತ್ತೇನೆ. 2 ಮತ್ತು 3 ನೇ ಪ್ರತಿವಾದಿಯರು ರತ್ನಗಿರಿಯಲ್ಲಿ ಇರುತ್ತಾರೆ. ಸದರಿಯವರು 7-8 ವರ್ಷಗಳಿಂದ ರತ್ನಗಿರಿಯಲ್ಲಿ ಇರುತ್ತಾರೆ. ನನಗೆ ಪ್ರತಿವಾದಿಯರ ಕುಟುಂಬದ ಬಗ್ಗೆ ಮಾಹಿತಿ ಇರುತ್ತದೆ. 1 ನೇ ವಾದಿಯ ತಂದೆಗೆ 5 ಜನ ಮಕ್ಕಳು ಇರುತ್ತಾರೆ. ಸದರಿಯವನಿಗೆ ಒಬ್ಬ ಹೆಣ್ಣು ಮಗಳು, 5 ಜನ ಗಂಡು ಮಕ್ಕಳು ಇರುತ್ತಾರೆ. ಬಾವಾಸಾಬ ಮತ್ತು ಆತನ ಮಕ್ಕಳು ಮೊದಲು ನೀರಲಗಿಯಲ್ಲಿ ಇರುತ್ತಿದ್ದರು ಎಂದರೆ ಸರಿ. ಬಾವಾಸಾಬನು ನೀರಲಗಿಯಲ್ಲಿ ಯಾವ ಮನೆಯಲ್ಲಿ ಇದ್ದನು ಎಂದು ನನಗೆ ಗೊತ್ತಿರುವುದಿಲ್ಲ. ನೀರಲಗಿಯಲ್ಲಿರುವ ಮನೆ ಮೊದಲು ಬಾವಾಸಾಬನ ಹೆಸರಿನಲ್ಲಿ ಇತ್ತು ನಂತರ ನಬೀಸಾಬನ ಹೆಸರಿನಲ್ಲಿ ದಾಖಲಾಗಿರುತ್ತದೆ. ಈಗ ಯಾರ ಹೆಸರಿನಲ್ಲಿ ಇರುತ್ತದೆ ಅಂತ ನನಗೆ ಗೊತ್ತಿರುವುದಿಲ್ಲ. ನಬೀಸಾಬನ ಹೆಸರಿನಲ್ಲಿರುವ ಮನೆಯಲ್ಲಿ ಈಗ ಯಾರು ಇರುವುದಿಲ್ಲ. 5 ಜನ ಗಂಡು ಮಕ್ಕಳು ಮತ್ತು ಒಬ್ಬ ಹೆಣ್ಣು ಮಕ್ಕಳ ಪೈಕಿ ಬಾಷಣ್ಣ ಸದರಿ ಮನೆಯಲ್ಲಿ ಇರುತ್ತಾನೆ. ಸಾಕ್ಷಿ ಮುಂದುವರೆದು ಮೊದಲು ಆತನ ಕಡಕೋಳದಲ್ಲಿ ಇದ್ದನು, ಈಗ ನೀರಲಗಿಯಲ್ಲಿ ಇರುತ್ತಾನೆ ಎಂದು ನುಡಿಯುತ್ತಾರೆ. ಬಾವಾಸಾಬನನ್ನು ನಾನು ನೋಡಿರುತ್ತೇನೆ. ಬಾವಾಸಾಬನನ್ನು ನಾನು ನೋಡಿದಾಗ ನಾನು 17-18 ವರ್ಷದವನು ಇದ್ದೆನು. ಆಗ ಬಾವಾಸಾಬನಿಗೆ 60 ವರ್ಷ ವಯಸ್ಸು ಇದ್ದವು.

**02.** ದಾವಾ ಆಸ್ತಿಯ ಸರ್ವೆ ನಂ.103 ಇರುತ್ತದೆ. ಸದರಿ ಜಮೀನನ್ನು ನಾನು ನೋಡಿರುತ್ತೇನೆ. ಸದರಿ ಜಮೀನಿನ ಪೂರ್ವಕ್ಕೆ-ನೀಲವ್ವ ಗಂಡ ಜುಮ್ಮಪ್ಪ ಬೇಕಿನಾಳಇವರ ಜಮೀನು, ಪಶ್ಚಿಮಕ್ಕೆ-ಚನ್ನಪ್ಪಗೌಡ ಪಾಟೀಲ ಇವರ ಜಮೀನು, ದಕ್ಷಿಣಕ್ಕೆ-ದೇಸಾಯಿ ಇವರ

ಜಮೀನು, ಉತ್ತರಕ್ಕೆ-ದಾರಿ ಇರುತ್ತದೆ. ಪೂರ್ವಕ್ಕೆ ನಮ್ಮ ತಂಗಿಯ ಹೊಲ ಇದೆ ಅಂತ ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ನನ್ನ ವಯಸ್ಸು 75 ಅಂತ ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಬಾವಾಸಾಬನ ಜಮೀನಿನ ಪಹಣಿಯನ್ನು ನಾನು ನೋಡಿರುತ್ತೇನೆ. ಸದರಿ ಜಮೀನು ಮೊದಲು ಬಾವಾಸಾಬನ ಹೆಸರಿನಲ್ಲಿ ಇತ್ತು, ಅದಕ್ಕಿಂತ ಮುಂಚೆ ಯಾರ ಹೆಸರಿನಲ್ಲಿ ಇತ್ತು ಎಂದು ನನಗೆ ಗೊತ್ತಿರುವುದಿಲ್ಲ. ಬಾವಾಸಾಬ ಈತನು 30 ವರ್ಷಗಳ ಹಿಂದೆ ಬನ್ನೆಟ್ಟಿಗೆ ಹೋಗಿ ನೆಲೆಸಿರುತ್ತಾನೆ. ಅದಕ್ಕಿಂತ ಮುಂಚೆ ಎಲ್ಲರೂ ನೀರಲಗಿ ಗ್ರಾಮದಲ್ಲಿ ಇರುತ್ತಿದ್ದರು ಎಂದರೆ ನಿಜ. ಸದರಿಯವರು ಬನ್ನೆಟ್ಟಿಗೆ ಹೋದ ನಂತರ ಅವರ ಮನೆತನದ ಬಗ್ಗೆ ನನಗೆ ಮಾಹಿತಿ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ.

**03.** ಬಾವಾಸಾಬನ ಹಿರಿಯ ಮಗ ನಬೀಸಾಬ ಇರುತ್ತಾನೆ. ನಂತರ ಪೀರಸಾಬ, ಬಾಷಾಸಾಬ, ಹುಸೇನಸಾಬ, ಲಾಳೇಸಾಬ ಮತ್ತು ಲಾಳೆಮಾ ಇರುತ್ತಾರೆ. ಸದರಿಯವರು ನೀರಲಗಿಯಲ್ಲಿ ಇದ್ದಾಗ ನಬೀಸಾಬನು 18-20 ವರ್ಷದವನು ಇದ್ದನು. ಬಾವಾಸಾಬ ನನ್ನ ಮಗನಿಗೆ ಜಮೀನು ಬಿಟ್ಟುಕೊಟ್ಟಿರುತ್ತೇನೆ ಎನ್ನುವ ವಿಷಯವನು ಆತನು ನೀರಲಗಿಯಲ್ಲಿ ಇದ್ದಾಗ ನನಗೆ ಹೇಳಿರುತ್ತಾನೆ. ಬಾವಾಸಾಬ ಮಗನಿಗೆ ತನ್ನ ಜಮೀನು ಬಿಟ್ಟುಕೊಟ್ಟಾಗ ನಾನು ನೀರಲಗಿಯಲ್ಲಿ ಇದ್ದೆನು. ಜಮೀನು ಬಿಟ್ಟುಕೊಡುವಾಗ ನಾನು ಇರಲಿಲ್ಲ, ಅವರು ಹೇಳಿರುವದಷ್ಟೇ ನನಗೆ ಗೊತ್ತಿರುತ್ತದೆ. ನನಗೆ ಜಮೀನು ಬಿಟ್ಟು ಕೊಟ್ಟ ಬಗ್ಗೆ ಸ್ವಂತ ಮಾಹಿತಿ ಇಲ್ಲ, ಅವರು ಹೇಳಿದ್ದು ಮಾತ್ರ ಗೊತ್ತಿರುತ್ತದೆ ಎಂದರೆ ಸರಿ. ಬಾವಾಸಾಬ ಮಗನಿಗೆ ಜಮೀನು ಬಿಟ್ಟುಕೊಟ್ಟ ದಾಖಲೆಯನ್ನು ನಾನು ನೋಡಿರುವುದಿಲ್ಲ ಮತ್ತು ಬರೆದುಕೊಟ್ಟ ಬಗ್ಗೆ ನನಗೆ ಹೇಳಿರುವುದಿಲ್ಲ.

**04.** ಬಾವಾಸಾಬ ಜೀವಂತ ಇದ್ದಾಗ ಆತನ ಹೊಲವನ್ನು ಆತನ ಎಲ್ಲಾ ಮಕ್ಕಳು ಅದರ ಮಾಲನ್ನು ಉಣ್ಣುತ್ತಿದ್ದರು, ಆತನು ತೀರಿಕೊಂಡ ನಂತರವೂ ಸಹ ಎಲ್ಲಾ ಮಕ್ಕಳು ಕೂಡಿ ಉಣ್ಣುತ್ತಿದ್ದರು ಎಂದರೆ ಸಾಕ್ಷಿಯು ಎಲ್ಲರೂ ದಿಕ್ಕಿಗೆ ಒಬ್ಬಬ್ಬೊರು ಇದ್ದರು ಅವರು ಕೂಡಿ ಉಣ್ಣುತ್ತಿದ್ದರೋ ಇಲ್ಲವೋ ಎನ್ನುವುದರ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನನಗೆ ಬಾವಾಸಾಬ ತೀರಿಕೊಂಡ ನಂತರ ದಾವಾ ಆಸ್ತಿಯನ್ನು ಯಾರು ಬಿತ್ತಿಬೆಳೆಯುತ್ತಿದ್ದರು ಮತ್ತು ಯಾರು ಉಣ್ಣುತ್ತಿದ್ದರು ಎನ್ನುವ ಬಗ್ಗೆ ನನಗೆ ವೈಯಕ್ತಿಕವಾಗಿ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಬೀಸಾಬನೇ ಬಿತ್ತಿಬೆಳೆಯುತ್ತಿದ್ದನು ಎಂದು ನುಡಿಯುತ್ತಾರೆ. ನಾನು 1 ರಿಂದ 3 ನೇ ಪ್ರತಿವಾದಿಯರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಬಾವಸಾಬನ ಕುಟುಂಬದ ಬಗ್ಗೆ ವೈಯಕ್ತಿಕ ಮಾಹಿತಿ ಇಲ್ಲದೇ ಇದ್ದರೂ ಸದರಿಯವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಬಾವಾಸಾಬನು ನನಗೆ ಹೇಳಿದ್ದನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಪೂರ್ವಕ್ಕೆ ನನ್ನ ತಂಗಿಯ ಮಗನ ಹೊಲವನ್ನು ನಾನು ಬಿತ್ತಿ ಬೆಳೆಯುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ಮನೆತನದ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಶೋರಾಪುರ.